# ಆಪ್ತಸಮಾಲೋಚನೆಯ ನೈತಿಕ ತತ್ವಗಳು ಮತ್ತು ಸಮಸ್ಯೆಗಳು

© Project Stree Manoraksha, NIMHANS

# ಕಲಿಕೆಯ ಉದ್ದೇಶಗಳು

- ನೈತಿಕತೆಯ ಮಹತ್ವವನ್ನು ಅರ್ಥಮಾಡಿಕೊಳ್ಳಲು
- ಆಪ್ತಸಮಾಲೋಚನೆಯ ವಿವಿಧ ನೈತಿಕ ಅಡಿಪಾಯ ಮತ್ತು ಅದರ ಪ್ರಕ್ರಿಯೆಯ ಬಗ್ಗೆ ಚರ್ಚಿಸಲು
- ನೈತಿಕತೆಯಲ್ಲಿ ಗೌಪ್ಯತೆಯ ಪ್ರಾಮುಖ್ಯತೆ ಹಾಗೂ ಅದರ ಮಿತಿಗಳನ್ನು ತಿಳಿದುಕೊಳ್ಳುವುದು.
- ಆಪ್ತಸಮಾಲೋಚನೆಯಲ್ಲಿ ಸಾಮಾನ್ಯ ನೈತಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು.



© Project Stree Manoraksha, NIMHANS

# ಕಲಿಕೆಯ ಉದ್ದೇಶಗಳು

- ಟ್ರಾನ್ಸ್ಫರೆನ್ಸ್ (transference) ಪರಿಕಲ್ಪನೆ ಮತ್ತು ಅದರ ಸೂಚನೆಗಳನ್ನು ಅರ್ಥಮಾಡಿಕೊಳ್ಳಲು
- ಆಪ್ತಸಮಾಲೋಚಕರ ಕೌಂಟರ್ ಟ್ರಾನ್ಸ್ ಫರೆನ್ಸ್ (countertransference) ಪ್ರತಿಕ್ರಿಯೆಗಳನ್ನು ಗುರುತಿಸಲು



© Project Stree Manoraksha, NIMHANS

# ಆಪ್ತಸಮಾಲೋಚನೆಯಲ್ಲಿ ನೈತಿಕ ಸಿದ್ಧಾಂತಗಳು
# (Ethical Principles in Counselling)

- ಹಿಂಸೆಯನ್ನು ಎದುರಿಸುತ್ತಿರುವ ಮಹಿಳೆಯರೊಂದಿಗೆ ಕೆಲಸ ಮಾಡುವುದು ಹಲವು ನೈತಿಕ ಸಂದಿಗ್ಧತೆಗಳಿಂದ (dilemmas) ತುಂಬಿಕೊಂಡಿರುತ್ತದೆ.

- ನೈತಿಕ ಮಾನದಂಡಗಳನ್ನು ಕಾಪಾಡಿಕೊಳ್ಳುವುದು ಯಾವುದೇ ಸಂಸ್ಥೆಯ ಕಲ್ಯಾಣಕ್ಕೆ ಮತ್ತು ವ್ಯಕ್ತಿಯ ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ.

© Project Stree Manoraksha, NIMHANS

# ಆಪ್ತಸಮಾಲೋಚನೆಯಲ್ಲಿ ನೈತಿಕ ಸಿದ್ಧಾಂತಗಳು..

ನೈತಿಕತೆ ನಮಗೆ ಈ ಕೆಳಗಿನವುಗಳಿಗೆ ಮಾರ್ಗದರ್ಶನ ನೀಡುತ್ತದೆ –

- ❑ ಪ್ರತಿಯೊಬ್ಬ ವ್ಯಕ್ತಿಯ ಅವರ ನಂಬಿಕೆಗಳು ಮತ್ತು ಇಚ್ಛೆಗೆ ಅನುಗುಣವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಕ್ಕನ್ನು ಗೌರವಿಸುವುದು ಮತ್ತು ಗುರುತಿಸುವುದು.
- ❑ ಅಭ್ಯರ್ಥಿಗೆ ಉಪಯೋಗವಾಗುವಂತಹ ಬದ್ಧತೆಯನ್ನು (commitment to benefit the client) ರೂಪಿಸುವುದು
- ❑ ಉದ್ದೇಶಪೂರ್ವಕವಾಗಿ ಇತರರಿಗೆ ಹಾನಿ ಮಾಡಬಾರದು (not to harm others intentionally)
- ❑ ಸಮಾಜದೊಳಗೆ ನ್ಯಾಯೋಚಿತ/ಸಮಾನವಾಗಿ ಸೇವೆಗಳು ತಲುಪುವಂತಿರಬೇಕು.

© Project Stree Manoraksha, NIMHANS


# ಆಪ್ತಸಮಾಲೋಚನೆಯಲ್ಲಿ ನೈತಿಕ ಸಿದ್ಧಾಂತಗಳು..

- ಆಪ್ತಸಮಾಲೋಚಕರಿಗೆ ಈ ಕೇಳಗಿನವುಗಳಲ್ಲಿ ವ್ಯತ್ಯಾಸವನ್ನು ಕಂಡುಹಿಡಿಯಲು ಸಹಾಯ ಮಾಡುತ್ತದೆ:
  - ಸ್ನೇಹಿತ ಅಥವಾ ಸ್ನೇಹಪರವಾಗಿರುವುದು

    (Being friendly vs friends)
  - ಕ್ಲೈಂಟ್‌ನೊಂದಿಗೆ ಇರುವುದು, ಕ್ಲೈಂಟ್ ಆಗುವುದಲ್ಲ.
- ಇದು "ರಕ್ಷಕ" (rescuer) ಪಾತ್ರಗಳನ್ನು ತಪ್ಪಿಸಲು ಸಹಾಯ ಮಾಡುತ್ತದೆ. ಉದಾ: ಹಣ ನೀಡುವುದು, ಅವರಿಗೆ ಹಣವನ್ನು ಸಾಲ ನೀಡುವುದು, ಮಕ್ಕಳ ಆರೈಕೆಯಲ್ಲಿ ಸಹಾಯ ಮಾಡುವುದು.

© Project Stree Manoraksha, NIMHANS

# ನೈತಿಕ ಸಂದಿಗ್ಧತೆ
# (ethical dilemma)






© Project Stree Manoraksha, NIMHANS

# ಆಪ್ತಸಮಾಲೋಚನೆಯಲ್ಲಿ ನೈತಿಕ ಸಿದ್ಧಾಂತಗಳು..

| ಆಪ್ತಸಮಾಲೋಚನೆಯ ಮುಖ್ಯ ನೈತಿಕ ಸಿದ್ಧಾಂತಗಳು (Main ethical principles of counselling) | ಆಪ್ತಸಮಾಲೋಚನೆಯ ಅವಿಭಾಜ್ಯ ಅಂಗ (Integral part of counselling) |
|---|---|
| • ಉಪಕಾರ (Beneficence)<br>• ಯಾವುದೇ ಹಾನಿ ಮಾಡದಿರುವುದು (Non-maleficence)<br>• ಸ್ವಾಯತ್ತತೆ (Autonomy)<br>• ನ್ಯಾಯ (Justice) | • ಗೌಪ್ಯತೆ (Confidentiality)<br>• ನಂಬಲರ್ಹವಾಗಿರುವುದು (Being trustworthy)<br>• ತಾಳ್ಮೆ(patience)<br>• ಪ್ರಾಮಾಣಿಕತೆ (Genuineness)<br>• ಬೇಷರತ್ತಾದ ಸಕಾರಾತ್ಮಕ ಗೌರವ (Unconditional positive respect)<br>• ವೃತ್ತಿಪರ ಜವಾಬ್ದಾರಿ (Professional responsibility) |

© Project Stree Manoraksha, NIMHANS

# ಆಪ್ತಸಮಾಲೋಚನೆಯ ಮುಖ್ಯ ನೈತಿಕ ಸಿದ್ಧಾಂತಗಳು

(Main ethical principles of counselling)

© Project Stree Manoraksha, NIMHANS

# ಉಪಕಾರ (Beneficence)

- ಉಪಕಾರ (Beneficence) ವ್ಯಕ್ತಿಯ ಹಿತಾದೃಷ್ಟಿಯಿಂದ ಕಾರ್ಯನಿರ್ವಹಿಸುವುದು.
- ಸಮರ್ಪಕ ತರಬೇತಿ, ಅನುಭವ ಮತ್ತು ಮೇಲ್ವಿಚಾರಣೆಯ ಅಭ್ಯಾಸಗಳ (supervised practice) ಮೇಲೆ ಸೇವೆಗಳನ್ನು ಒದಗಿಸುವುದು.
- ಒಬ್ಬರ ಸಾಮರ್ಥ್ಯದ ಮಿತಿಗಳನ್ನು (limits of competence) ಅರ್ಥಮಾಡಿಕೊಳ್ಳುವುದು.

© Project Stree Manoraksha, NIMHANS

# ಉಪಕಾರ (Beneficence)…

- ಸಂವೇದನಾ ಮತ್ತು ಬೌದ್ಧಿಕ ಅಸಾಮರ್ಥ್ಯದಿಂದಾಗಿ (sensory & intellectual disability) ಸ್ವಾಯತ್ತತೆ (autonomy) ಮತ್ತು ತೀರ್ಪಿನ (judgement) ಸಾಮರ್ಥ್ಯ ಕಡಿಮೆಯಾದ ವ್ಯಕ್ತಿಗೆ ಸೇವೆಯನ್ನು ಒದಗಿಸುವುದು.

- ಇದರ ಜೊತೆಗೆ ತೀವ್ರ ಯಾತನೆ, ಗಂಭೀರ ಅನನುಕೂಲತೆ ಅಥವಾ ಗಮನಾರ್ಹ ವೈಯಕ್ತಿಕ ನಿರ್ಬಂಧಗಳು (personal constraints).

© Project Stree Manoraksha, NIMHANS

# ಸ್ವಾಯತ್ತತೆ (Autonomy)

- ಮಹಿಳೆ ಆಪ್ತಸಮಾಲೋಚಕರಲ್ಲಿ ಅವಲಂಬನೆಯಾಗುವುದನ್ನು ಕಡಿಮೆ ಮಾಡಬೇಕಾಗುತ್ತದೆ ಮತ್ತು ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವಿಕೆಯನ್ನು ಪ್ರೋತ್ಸಾಹಿಸಬೇಕು.

- ಮಹಿಳೆಯ ಸ್ವ-ನಿರ್ದೇಶನದ (self-direct) ಸಾಮರ್ಥ್ಯವನ್ನು ಗೌರವಿಸಿ ಮತ್ತು ಅಂಗೀಕರಿಸಿ (acknowledge) - ಮಹಿಳೆ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿ ತರುವಂತೆ, ತನಗೆ ಬೇಕಾದಂತೆ ನಿರ್ಧರಿಸುವ ಮತ್ತು ಕಾರ್ಯನಿರ್ವಹಿಸಬಹುದು.

- ಮಹಿಳೆಯ ಅಗತ್ಯಗಳು/ಇಚ್ಛೆಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವುದು (ಇತರರ ಇಚ್ಛೆ/ಅಗತ್ಯಗಳನ್ನು ಪಾಲಿಸುವ ಬದಲು)

© Project Stree Manoraksha, NIMHANS

# ಸ್ವಾಯತ್ತತೆ (Autonomy)...

- ಆಪ್ತಸಮಾಲೋಚಕರು ಉದ್ದೇಶಪೂರ್ವಕವಾಗಿ ಅಥವಾ ಉದ್ದೇಶಪೂರ್ವಕವಲ್ಲದೆ ಮಹಿಳೆಯ ಮೇಲೆ ತಮ್ಮ ಅಭಿಪ್ರಾಯಗಳನ್ನು ಹೇರಬಾರದು.

- ಯಾವುದೇ ಹಂತದಲ್ಲಿ ಆಪ್ತಸಮಾಲೋಚನೆಯನ್ನು ನಿರಾಕರಿಸುವ, ನಿಲ್ಲಿಸುವ ಅಥವಾ ಪುನರಾರಂಭಿಸುವ ಮಹಿಳೆಯ ಹಕ್ಕನ್ನು ಗೌರವಿಸುವುದು.

© Project Stree Manoraksha, NIMHANS

# ಯಾವುದೇ ಹಾನಿ ಮಾಡದಿರುವುದು (Non-Maleficence)

- "ಎಲ್ಲಕ್ಕಿಂತ ಹೆಚ್ಚಾಗಿ ಯಾವುದೇ ಹಾನಿ ಮಾಡಬೇಡಿ" - (above all do no harm)
- ಲೈಂಗಿಕ, ಭಾವನಾತ್ಮಕ, ಆರ್ಥಿಕ ಅಥವಾ ಯಾವುದೇ ರೀತಿಯ ಶೋಷಣೆಯನ್ನು ತಪ್ಪಿಸುವುದು.
- ಅನಾರೋಗ್ಯ, ವೈಯಕ್ತಿಕ ಸಂದರ್ಭಗಳು ಅಥವಾ ಕುಡಿದು ಅಮಲೇರಿದ ಸ್ಥಿತಿಯಲ್ಲಿ ಸೇವೆಗಳನ್ನು ಒದಗಿಸಬಾರದು (not providing services when unfit to do so).

© Project Stree Manoraksha, NIMHANS

# ನ್ಯಾಯ (Justice)

- ಆಪ್ತಸಮಾಲೋಚಕರು ನ್ಯಾಯಯುತವಾಗಿರಬೇಕು (fair) ಮತ್ತು ಜಾತಿ, ವರ್ಗ, ವೈವಾಹಿಕ ಸ್ಥಿತಿ, ಲೈಂಗಿಕ ದೃಷ್ಟಿಕೋನ (sexual orientation), ಧರ್ಮ, ಅಂಗವೈಕಲ್ಯ ಇತ್ಯಾದಿಗಳ ಆಧಾರದ ಮೇಲೆ ತಾರತಮ್ಯ (discrimination) ಮಾಡಬಾರದು.
- ಅವಕಾಶ ಮತ್ತು ಸೇವೆಗಳ ಸಮಾನತೆಗೆ ಬದ್ಧವಾಗಿರಬೇಕು
- ಮಾನವ ಹಕ್ಕುಗಳು ಮತ್ತು ಘನತೆಯನ್ನು (dignity) ಗೌರವಿಸುವುದು

© Project Stree Manoraksha, NIMHANS

# ನ್ಯಾಯ (Justice)…

- ಪ್ರತಿ ಮಹಿಳೆ ಭಿನ್ನವಾಗಿರುತ್ತಾಳೆ; ಪ್ರತಿ ಮಹಿಳೆಗೆ ಒಂದೇ ಪರಿಹಾರವಲ್ಲ.

- ಪ್ರತಿ ಮಹಿಳೆಯ ಅಗತ್ಯಗಳಿಗೆ ಸಂಬಂಧಪಟ್ಟ ಮತ್ತು ಸೂಕ್ತವಾದ ಸೇವೆಗಳನ್ನು ನ್ಯಾಯಯುತವಾಗಿ ಒದಗಿಸುವುದು.

© Project Stree Manoraksha, NIMHANS

# ಆಪ್ತಸಮಾಲೋಚನೆಯ ಅವಿಭಾಜ್ಯ ಅಂಶಗಳು

## (Integral components of counselling)

© Project Stree Manoraksha, NIMHANS

# ಗೌಪ್ಯತೆ (Confidentiality)

ಅವಳ ಖಾಸಗಿತನ (privacy) ಮತ್ತು ಗೌಪ್ಯತೆಯನ್ನು ಗೌರವಿಸಿ

- ❑ ನೀವು ಮಹಿಳೆಯ ಖಾಸಗಿತನ (privacy) ಕಾಪಾಡುತ್ತಿದ್ದೀರೆಂದು ಖಚಿತಪಡಿಸಿಕೊಳ್ಳಿ
- ❑ ಆಪ್ತಸಮಾಲೋಚಕರು ಮಹಿಳೆಯ ಬಗ್ಗೆ ಯಾವ ಮಾಹಿತಿಯನ್ನು ಯಾರಿಗೂ ಬಹಿರಂಗಪಡಿಸಬಾರದು
- ❑ ಅವಳ ಆಸಕ್ತಿ ಅಥವಾ ಒಪ್ಪಿಗೆ ಇಲ್ಲದೆ ಅವಳ ಘಟನೆಯ ಕುರಿತು ಯಾರೊಂದಿಗೂ ಚರ್ಚಿಸಬೇಡಿ.

© Project Stree Manoraksha, NIMHANS

# ಗೌಪ್ಯತೆ (Confidentiality)...

- ಸಂಗ್ರಹಣೆ (Storage):
  - ಎಲ್ಲಾ ಔಪಚಾರಿಕ ಮತ್ತು ಅನೌಪಚಾರಿಕ (formal and informal) ವಿಷಯಗಳ ವಿನಿಮಯ
  - ಲಿಖಿತ ವರದಿಗಳು (written reports) ಮತ್ತು ಕೇಸ್ ದಾಖಲೆಗಳು (case records)
- ಹಂಚಿಕೊಳ್ಳುವುದು (sharing):

  ಮಹಿಳೆಯ ಒಪ್ಪಿಗೆಯೊಂದಿಗೆ ಮಾತ್ರ ಅವಳ ಮಾಹಿತಿಯನ್ನು ಕುಟುಂಬದ ಸದಸ್ಯರು ಮತ್ತು ವೃತ್ತಿಪರರಿಗೆ (professionals) ಹಂಚಿಕೊಳ್ಳುವುದು.
- ಭದ್ರತೆ (security): ಭೌತಿಕ (physical) ಅಥವಾ ಎಲೆಕ್ಟ್ರಾನಿಕ್ ರೂಪದಲ್ಲಿರುವ ಸಂಗ್ರಹಿಸಿದ ಮಾಹಿತಿಯನ್ನು ರಕ್ಷಿಸುವುದು.

© Project Stree Manoraksha, NIMHANS

# ಗೌಪ್ಯತೆ (Confidentiality)...

- ಮಹಿಳೆಯ ಒಪ್ಪಿಗೆಯೊಂದಿಗೆ ಮಾತ್ರ ಆತ್ಮೀಯ ಸಂಗಾತಿಯ ದೌರ್ಜನ್ಯ/ಲಿಂಗ ಆಧಾರಿತ ಹಿಂಸೆಗೆ ಸಂಬಂಧಿಸಿದ ಯಾವುದೇ ಸಮಸ್ಯೆಗಳನ್ನು ಬಹಿರಂಗಪಡಿಸಬಹುದು.

- ಬಹಿರಂಗಪಡಿಸುವಿಕೆಯ (disclosure) ಸಾಧಕ-ಬಾಧಕಗಳ (pros and cons) ತಿಳುವಳಿಕೆಯುಳ್ಳ ನಿರ್ಧಾರವನ್ನು ತೆಗೆದುಕೊಳ್ಳಲು ಆಕೆಗೆ ಸಹಾಯ ಮಾಡಿ

- ವೃತ್ತಿಪರರು, ಇತರ ಶಿಫಾರಸ್ಸು (referral) ಏಜೆನ್ಸಿಗಳು ಅಥವಾ ಕುಟುಂಬದ ಸದಸ್ಯರೊಂದಿಗೆ ದೌರ್ಜನ್ಯದ ಕುರಿತು ಬಹಿರಂಗಪಡಿಸುವಾಗ ವಿವೇಚನೆಯನ್ನು (discretion) ಬಳಸತಕ್ಕದ್ದು.

© Project Stree Manoraksha, NIMHANS

# ಗೌಪ್ಯತೆಯನ್ನು ನಾವು ಯಾವಾಗ ಪಾಲಿಸದೆಯಿರಬಹುದು

- ಮಹಿಳೆ ಯಾವಾಗ ತನ್ನನ್ನು ತಾನೇ ಹಾನಿ ಮಾಡಿಕೊಳ್ಳುವ ಅಪಾಯವನ್ನು ಹೊಂದಿರುವಾಗ (ಆತ್ಮಹತ್ಯಾ ಆಲೋಚನೆಗಳು/ನಡವಳಿಕೆಗಳು)
- ಮಹಿಳೆ ಯಾವಾಗ ಇತರರಿಗೆ ಹಾನಿ ಮಾಡುವ ಅಪಾಯವನ್ನು ಹೊಂದಿರುವಾಗ
- ಮಕ್ಕಳ ನಿಂದನೆ ಅಥವಾ ನಿರ್ಲಕ್ಷ್ಯದ ಸಂದರ್ಭಗಳಲ್ಲಿ
- ದುರ್ಬಲ (vulnerable) ವಯಸ್ಕರು ನಿಂದನೆಗೆ ಒಳಗಾದಾಗ (ಉದಾ. ಬೌದ್ಧಿಕ ಅಂಗವೈಕಲ್ಯ (intellectual disability), ಇಂದ್ರಿಯಗಳ ದುರ್ಬಲತೆ (sensory impairment) ಹೊಂದಿರುವ ವ್ಯಕ್ತಿ).

© Project Stree Manoraksha, NIMHANS

# ಗೌಪ್ಯತೆಯನ್ನು ನಾವು ಯಾವಾಗ ಪಾಲಿಸದೆಯಿರಬಹುದು...

- ನ್ಯಾಯಾಲಯದ ಆದೇಶದ (court orders) ಮೇರೆಗೆ ಮನೋವೈಜ್ಞಾನಿಕ ಮೌಲ್ಯಮಾಪನದ (psychological evaluations) ಸಮಯದಲ್ಲಿ
- ಇಚ್ಛೆಯಿಲ್ಲದ ಆಸ್ಪತ್ರೆಗೆ (involuntary hospitalization) ಸೇರಿಸುವ ಉದ್ದೇಶಕ್ಕಾಗಿ
- ಕಾನೂನಾತ್ಮಕ ಪ್ರಕ್ರಿಯೆಗಳಲ್ಲಿ ಮಹಿಳೆ ಮಾನಸಿಕ ಆರೋಗ್ಯ ಸಮಸ್ಯೆಗಳ ಬಗ್ಗೆ ಹೇಳಿದಾಗ

© Project Stree Manoraksha, NIMHANS

# ನಂಬಿಗಸ್ತರಾಗಿರುವುದು (ನಿಷ್ಠೆ)
# (Being trustworthy (fidelity))

- ಮೋಸ ಮತ್ತು ಶೋಷಣೆಯಿಲ್ಲದೆ ವಿಶ್ವಾಸಾರ್ಹ (trusting) ಮತ್ತು ಚಿಕಿತ್ಸ- ವಾತಾವರಣವನ್ನು (therapeutic environment) ಕಲ್ಪಿಸುವುದು.
  - ಆಪ್ತಸಮಾಲೋಚಕರ ಮೇಲೆ ಇಟ್ಟಿರುವ ನಂಬಿಕೆಯನ್ನು ಗೌರವಿಸುವುದು
  - ಮಹಿಳೆಯ ಯಾವುದೇ ಗೌಪ್ಯ ಮಾಹಿತಿಯ ಬಗ್ಗೆ ಬಹಿರಂಗಪಡಿಸುವಿಕೆಯನ್ನು ನಿರ್ಬಂಧಿಸುವುದು
  - ಶುಲ್ಕದಲ್ಲಿ ಪಾರದರ್ಶಕತೆ (transparency in fees structure)

© Project Stree Manoraksha, NIMHANS

# ತಾಳ್ಮೆ (Patience)

- ತಾಳ್ಮೆ ಎಂದರೆ ನಕಾರಾತ್ಮಕ ಭಾವನೆಗಳನ್ನು ಅನುಭವಿಸದೆ ಅಥವಾ ನಿರಾಶೆ ಲಕ್ಷಣಗಳನ್ನು ಪ್ರದರ್ಶಿಸದೆ ಹತಾಶೆಯನ್ನು (frustration) ಸಹಿಸಿಕೊಳ್ಳುವುದು ಎಂದಾರ್ಥ.
- ಮಹಿಳೆಯ ಪ್ರಾರಂಭದ ಕೊರತೆ (lack of initiative) ಮತ್ತು ಹಿಂಜರಿಕೆಯು (reluctance) ಸಲಹೆಗಾರರ ಮೇಲೆ ಪರಿಣಾಮ ಬೀರುತ್ತದೆ, ಇದರ ಪರಿಣಾಮವಾಗಿ ಅವರಿಗೆ ಸಹಾಯ ಒದಗಿಸುವುದರಲ್ಲಿ ಉತ್ಸಾಹ ಕಳೆದುಕೊಳ್ಳಬಹುದು.
- ಮಹಿಳೆಯಲ್ಲಿ ಸಕಾರಾತ್ಮಕ ಬದಲಾವಣೆಯಾಗಲು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು.

© Project Stree Manoraksha, NIMHANS

# ಪ್ರಾಮಾಣಿಕತೆ (Genuineness)

- ಮಹಿಳೆಯ ಯೋಗಕ್ಷೇಮ (well being), ನಿಜವಾದ ಕಾಳಜಿ ಮತ್ತು ಅವರು ಏಕೆ ಬಂದಿದ್ದಾರೆ ಎಂಬುದನ್ನು ಆಪ್ತಸಮಾಲೋಚಕರು ಅರ್ಥಮಾಡಿಕೊಳ್ಳಬೇಕು.

- ಸ್ವ-ಅರಿವು (self-awareness) : ಆಪ್ತಸಮಾಲೋಚಕರು ತಮ್ಮ ಸಾಮರ್ಥ್ಯ (strengths) ಮತ್ತು ಇತಿ -ಮಿತಿಗಳ (limitations) ಬಗ್ಗೆ ತಿಳಿದಿರುವುದರ ಜೊತೆಗೆ ಅವರ ಭಾವನೆಗಳನ್ನು ಸೂಕ್ತವಾಗಿ ವ್ಯವಹರಿಸಬೇಕಾಗುತ್ತದೆ.

© Project Stree Manoraksha, NIMHANS

# ಪ್ರಾಮಾಣಿಕತೆ (Genuineness)...

- ಮಹಿಳೆಯೊಂದಿಗೆ ಆರಾಮದಾಯಕವಾಗಿರಬೇಕು (comfortable) - ಸುರಕ್ಷಿತ ವಾತಾವರಣದಲ್ಲಿ ಮುಕ್ತವಾಗಿ, ಆರಾಮದಾಯಕವಾಗಿ ಮಾತನಾಡಲು ಅನುವುಮಾಡಿಕೊಡಬೇಕು

- ಸಮಾಲೋಚಕರು ಮಹಿಳೆಗೆ ಆಕೆಯ ಪ್ರಸ್ತುತ ಸಂದರ್ಭಗಳನ್ನು ಲೆಕ್ಕಿಸದೆ ಅವಳಲ್ಲಿ ಇರುವ ಸಾಮರ್ಥ್ಯವನ್ನು ಅರ್ಥಮಾಡಿಸಬೇಕು.

© Project Stree Manoraksha, NIMHANS

# ಬೇಷರತ್ತಾದ ಸಕಾರಾತ್ಮಕ ಗೌರವ (Unconditional positive regard)

- ಮಹಿಳೆಯು ಪ್ರಶ್ನಾರ್ಹವಾದದ್ದನ್ನು (questionable) ಮಾಡಿದರೂ ಸಹ ಕಾಳಜಿ, ಪೋಷಣೆ ಮತ್ತು ಸ್ವೀಕರಿಸುವಂತಿರಬೇಕು (acceptance).

- ನಗು (smile), ಹಿತವಾದ ಧ್ವನಿ (tone of voice) ಮತ್ತು ಮುಖಭಾವದಂತಹ ಅಮೌಖಿಕ ನಡವಳಿಕೆಯ ಮೂಲಕ ಸ್ನೇಹಪರತೆಯನ್ನು (warmth)ಒದಗಿಸುವುದು.

© Project Stree Manoraksha, NIMHANS

# ಬೇಷರತ್ತಾದ ಸಕಾರಾತ್ಮಕ ಗೌರವ...
# (Unconditional positive regard)

- ❑ ವ್ಯಕ್ತಿಯ ಕ್ರಿಯೆಯನ್ನು ಖಂಡಿಸುವ ಬದಲು (rather condemning action)
- ❑ ಆಪ್ತಸಮಲೋಚಕರು ಮಹಿಳೆಯನ್ನು ಏಕೆ ಅಂತಹ ರೀತಿಯಲ್ಲಿ ವರ್ತಿಸಿದಿರಿ ಎಂದು ಕೇಳಬಹುದು.

© Project Stree Manoraksha, NIMHANS

# ವೃತ್ತಿಪರ ಜವಾಬ್ದಾರಿ (Professional responsibility)

- ಮಹಿಳೆಯ ಸ್ಥಿತಿಯ ನಿಖರವಾದ ಮೌಲ್ಯಮಾಪನ ಮಾಡುವುದು ಅತ್ಯಗತ್ಯ; ಇಲ್ಲದಿದ್ದರೆ, ಅವರಿಗೆ ಸರಿಯಾದ ಚಿಕಿತ್ಸೆ ಸಿಗದೇ ಇರಬಹುದು.

- ಉತ್ತಮ ಫಲಿತಾಂಶಗಳಿಗಾಗಿ ಪ್ರಮಾಣಿತ (standardized), ವಿಶ್ವಾಸಾರ್ಹ ಸಾಧನಗಳನ್ನು (reliable tools) ಮಾತ್ರ ಬಳಸುವುದು.

© Project Stree Manoraksha, NIMHANS

# ವೃತ್ತಿಪರ ಜವಾಬ್ದಾರಿ…
# (Professional responsibility)

- ಮಹಿಳೆಗೆ ತನ್ನ ಮಿತಿಯ ಗಡಿಯೊಳಗೆ (boundaries of competence) ಪ್ರಯೋಜನಕಾರಿ ಸೇವೆಗಳನ್ನು ಒದಗಿಸುವುದು ಮತ್ತು ಅಗತ್ಯವಿದ್ದಾಗ ಸೂಕ್ತ ಶಿಫಾರಸ್ಸು referral) ಮಾಡುವುದು.

- ವೈಯಕ್ತಿಕ ಒತ್ತಡವನ್ನು (personal stress) ನಿಭಾಹಿಸುವುದು ಮತ್ತು ಸೂಕ್ತ ಸೇವೆಗಳನ್ನು (adequate service) ಒದಗಿಸುವುದು.

© Project Stree Manoraksha, NIMHANS

# ಆಪ್ತಸಮಾಲೋಚಕರ ಮೇಲ್ವಿಚಾರಣೆ (Supervision of counsellor)

- ಆಘಾತ, ಅಸಹಾಯಕತೆ, ದುಃಖ, ಕೋಪ ಮುಂತಾದ ಹಲವಾರು ಭಾವನೆಗಳನ್ನು ಆಪ್ತಸಮಾಲೋಚಕರು ಅನುಭವಿಸಬಹುದು.
- ತಮ್ಮ ದುರ್ಬಲತೆಗಳು (vulnerabilities), ಪಕ್ಷಪಾತಗಳು (bias), ಮೌಲ್ಯಗಳು ಮತ್ತು ತತ್ವಗಳ ಬಗ್ಗೆ ತಿಳಿದಿರುವುದು ಮುಖ್ಯವಾಗಿದೆ
- ಆಪ್ತಸಮಾಲೋಚನೆಯ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ (interference) ಇಲ್ಲದಿರುವುದನ್ನು ಖಚಿತಪಡಿಸಿಕೊಳ್ಳಿ.
- ಆಪ್ತಸಮಾಲೋಚಕರು ತನ್ನ ಮೇಲ್ವಿಚಾರಕರೊಂದಿಗೆ (supervisor) ನಿಯಮಿತವಾದ ಚರ್ಚೆಯ (regular debriefing) ಅತ್ಯಗತ್ಯವಿರುತ್ತದೆ.

© Project Stree Manoraksha, NIMHANS

# ಟ್ರಾನ್ಸ್ ಫರೆನ್ಸ್ ಮತ್ತು ಕೌಂಟರ್ ಟ್ರಾನ್ಸ್ ಫರೆನ್ಸ್ (Transference and Countertransference)

© Project Stree Manoraksha, NIMHANS

# ಟ್ರಾನ್ಸ್ ಫರೆನ್ಸ್ (Transference)

- ಚಿಕಿತ್ಸಕನ (therapist) ಕಡೆಗೆ ವ್ಯಕ್ತಿಯ (client) ಅವಾಸ್ತವಿಕ (unrealistic) ಮತ್ತು ಆಗಾಗ್ಗೆ ಅನುಚಿತ ಭಾವನೆಗಳು, ಆಲೋಚನೆಗಳು ಮತ್ತು ನಡವಳಿಕೆಗಳು.
- ವ್ಯಕ್ತಿಯ (client) ಜೀವನದಲ್ಲಿ ಪ್ರಮುಖ ವ್ಯಕ್ತಿಗಳ ವರ್ತನೆಯ ಪ್ರಜ್ಞಾಪೂರ್ವಕ ವಲ್ಲದ (unconscious) ಸ್ಥಳಾಂತರ (displacement).
- ವ್ಯಕ್ತಿ ಆಪ್ತಸಮಾಲೋಚಕರ ಕಡೆಗೆ ತಂದೆ/ತಾಯಿಯ ಭಾವನೆಗಳನ್ನು ತೋರಿಸಬಹುದು. ಅದು ಒಳ್ಳೆಯ ಅಥವಾ ಕೆಟ್ಟದಾಗಿರಬಹುದು.

© Project Stree Manoraksha, NIMHANS

# ಟ್ರಾನ್ಸ್ ಫರೆನ್ಸ್ *ಸೂಚಕಗಳು*
# *(Transference indicators)*

- ವ್ಯಕ್ತಿಯ (client) ಆಪ್ತಸಮಾಲೋಚಕರ ಕಡೆಗೆ ಇದ್ದಕ್ಕಿದ್ದಂತೆ ವರ್ತನೆಗಳು ಬದಲಾಗಬಹುದು (ಕೋಪ, ತುಂಬಾ ಸ್ನೇಹಪರವಾಗಿ, ಅಸ್ಪಷ್ಟ, ಅಸಾಮಾನ್ಯವಾಗಿ ಮಾತನಾಡುವ)
- ವ್ಯಕ್ತಿ (client) ಟೀಕೆಗಳನ್ನು ಸಹ ಮಾಡಬಹುದು ("ಯಾರೂ ನನ್ನನ್ನು ಅರ್ಥಮಾಡಿಕೊಳ್ಳುವುದಿಲ್ಲ"; "ನಾನು ಎಲ್ಲರನ್ನು ನಿರಾಶೆಗೊಳಿಸುತ್ತೇನೆ")
- ವ್ಯಕ್ತಿ "ನನಗೆ ಚಿಕಿತ್ಸೆಯಿಂದ ಏನೇನು ಸಹಾಯವಾಗುತ್ತಿಲ್ಲ", "ನೀವು ನಿಮ್ಮ ಇತರ ಕ್ಲೈಂಟ್ ಗಳನ್ನು ಹೆಚ್ಚು ಇಷ್ಟಪಡುತ್ತೀರಿ" ಎಂಬ ಆರೋಪವನ್ನು ಚಿಕಿತ್ಸಕನು ಎದುರಿಸಬಹುದು.

© Project Stree Manoraksha, NIMHANS

# ಟ್ರಾನ್ಸ್ ಫರೆನ್ಸ್ *ಸೂಚಕಗಳು...*
# *(Transference indicators)*

- ಬೇಸರ, ಕೋಪ, ಅಂಟಿಕೊಂಡಿರುವುದು (stuck) , ನಿರಾಸಕ್ತಿ, ವಿಚಲಿತ (distract)
- ಲೈಂಗಿಕ ಆಕರ್ಷಣೆ
- ತಪ್ಪಿಸಿಕೊಳ್ಳುವ (avoidant) ಅಥವಾ ಭಯಪಡುವ
- ಚಿಕಿತ್ಸೆಯಲ್ಲಿ ಪರಿಣಾಮಕಾರಿ ಕೌಶಲ್ಯಗಳು/ಸಲಹೆಗಳನ್ನು ಅನುಸರಿಸಲು ಪ್ರಯತ್ನಿಸುವುದಿಲ್ಲ
- ಬೇಟಿಗಳನ್ನು ತಪ್ಪಿಸಿಕೊಳ್ಳುವುದು (missing appointments) ಮತ್ತು ಸಮಯಕ್ಕೆ ಬದ್ಧವಾಗಿರುವುದಿಲ್ಲ.

© Project Stree Manoraksha, NIMHANS

# ಟ್ರಾನ್ಸ್ ಫರೆನ್ಸ್ *ಹೆಚ್ಚಿಸುವ ಅಂಶಗಳು* (*Factors that increase transference)*

- ಒಬ್ಬ ವ್ಯಕ್ತಿಯ ಅಸಹಾಯಕ (helpless) ಅಥವಾ ಭಯಪಡುವ ಸಂದರ್ಭಗಳು, ಅವರಿಗೆ ರಕ್ಷಣಾತ್ಮಕ ಸಂಬಂಧದ (protective relationship) ಅಗತ್ಯವಿರುತ್ತದೆ.

- ತನ್ನ ದೈಹಿಕ ಅಥವಾ ಮಾನಸಿಕ ಸುರಕ್ಷತೆಯ ಬಗ್ಗೆ ಆತಂಕ (ಉದಾ. ಅನಾರೋಗ್ಯ ಮತ್ತು ಭಯಗೊಂಡಾಗ).

- ವ್ಯಕ್ತಿತ್ವ: ಅವರ ಮನಸ್ಥಿತಿ, ಭಾವನೆಗಳು ಮತ್ತು ಅಗತ್ಯಗಳನ್ನು ಪ್ರತಿಬಿಂಬಿಸುವ ಕಡಿಮೆ ಸಾಮರ್ಥ್ಯ (lesser ability to reflect).

© Project Stree Manoraksha, NIMHANS

# ಕೌಂಟರ್ ಟ್ರಾನ್ಸ್ ಫರೆನ್ಸ್ (Countertransference)

- ಕೌಂಟರ್ ಟ್ರಾನ್ಸ್ ಫರೆನ್ಸ್ ಎನ್ನುವುದು ಆಪ್ತಸಮಾಲೋಚನಕಾರರ ಹಿಂದಿನ ಅನುಭವಗಳು ಮತ್ತು ವೈಯಕ್ತಿಕ ಸಮಸ್ಯೆಗಳ ಆಧಾರದ ಮೇಲೆ ಪ್ರತಿಕ್ರಿಯೆಗಳು (ವ್ಯಕ್ತಿಯ (client) ಟ್ರಾನ್ಸ್ ಫರೆನ್ಸ್ ಪ್ರತಿಕ್ರಿಯೆಗಳು ಸೇರಿದಂತೆ).

- ಕೌಂಟರ್ ಟ್ರಾನ್ಸ್ ಫರೆನ್ಸ್ ಈ ಸನ್ನಿವೇಶಗಳಲ್ಲಿ ಆಗಬಹುದು...
  - ಚಿಕಿತ್ಸಕನು ತಮ್ಮ ಸ್ವಂತ ಭಾವನೆಗಳನ್ನು ಅಥವಾ ಆಸೆಗಳನ್ನು ತಮ್ಮ ವ್ಯಕ್ತಿಯ (client) ಮೇಲೆ ಮರುನಿರ್ದೇಶಿಸಿದಾಗ

© Project Stree Manoraksha, NIMHANS

# ಕೌಂಟರ್ ಟ್ರಾನ್ಸ್ ಫರೆನ್ಸ್ (Countertransference)

- ಕೌಂಟರ್ ಟ್ರಾನ್ಸ್ ಫರೆನ್ಸ್ ಸಂಭವಿಸುವುದು ...
  - ಆಪ್ತಸಮಾಲೋಚಕ ತನ್ನ ಉದ್ದೇಶವನ್ನು ಕಳೆದುಕೊಂಡಾಗ
  - ಕ್ಲೈಂಟ್‌ನ ಕಥೆ/ಘಟನೆಯನ್ನು ಕೇಳಿದಾಗ ವಿಪರೀತ, ಕೋಪ ಅಥವಾ ದುಃಖ.
  - ಉದಾ: ಸಮಾಲೋಚಕರ ಜೀವನದಲ್ಲಿ ಮಹಿಳೆ ಅನುಭವಿಸುತ್ತಿರುವ ಲೈಂಗಿಕ ನಿಂದನೆಯ ಸಮಸ್ಯೆಗಳನ್ನು ಎದುರಿಸಿದ್ದರೆ...

© Project Stree Manoraksha, NIMHANS

# ಕೌಂಟರ್ ಟ್ರಾನ್ಸ್ ಫರೆನ್ಸ್...
# (Countertransference)

- ಮಹಿಳೆಯ ಅನುಭವಗಳು ಆಪ್ತಸಮಾಲೋಚಕರಲ್ಲಿ ನಿಂದನೆಯ ಅನುಭವದಿಂದ ಉಂಟಾದ ಕ್ರೋಧ ಮತ್ತು ಅವಮಾನದಂತಹ ವಿಪರೀತ ಭಾವನೆಗಳನ್ನು ಉಂಟುಮಾಡುವ ಸಾಧ್ಯತೆಯಿರುತ್ತದೆ.

- ಈ ಭಾವನೆಗಳು ಉದ್ದೇಶದ (objectivity) ಮೇಲೆ ಪರಿಣಾಮ ಬೀರಬಹುದು ಮತ್ತು ಮಹಿಳೆಗೆ ಸಹಾಯ ಮಾಡುವ ಸಾಮರ್ಥ್ಯದ ಮೇಲೆ ಪರಿಣಾಮ ಬೀರಬಹುದು.

© Project Stree Manoraksha, NIMHANS

# ಕೌಂಟರ್ ಟ್ರಾನ್ಸ್ ಫರೆನ್ಸ್ (Countertransference)

ಚಿಕಿತ್ಸಕನು ಪರೀಕ್ಷಿಸಬೇಕಾದದ್ದು:

- ಮಹಿಳೆ ಮೇಲಿನ ಸಹಾನುಭೂತಿ (empathy) ಕನಿಕರವಾಗಿ (sympathy) ಮಾರ್ಪಡುವುದು (identifying with client).
- ಸಮಾಲೋಚನೆಯ ಪ್ರಗತಿಯ ಕೊರತೆಯಿಂದಾಗಿ ಕಿರಿಕಿರಿ ಮತ್ತು ಅಸಹನೆ.
- ಮಹಿಳೆ ಮೇಲಿನ ಇಷ್ಟ ಅಥವಾ ಇಷ್ಟಇಲ್ಲದಿರುವುದರ ಬೆಳವಣಿಗೆ

© Project Stree Manoraksha, NIMHANS

# ಧನ್ಯವಾದಗಳು

Remy Lobo, Project Trainer
Sampurna Chakraborty, Project Manager
Kimneihat Vaiphei, Co – Principal Investigator
Project Stree Manoraksha, NIMHANS